**ದಿ : 12-11-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆ:- ಅರ್ಜಿದಾರರ ಪರ ವಕೀಲರಿಂದ**

ದೋಷಾರೋಪಣ ಪಟ್ಟಿಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು **ನಿ.ಪಿ - 59** ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತೇನೆ.

ಪಾಟೀ **ಸವಾಲು : 2ನೇ ಎದುರುದಾರ ವಿಮಾ ಕಂಪನಿಯ ಪರ ವಕೀಲರಾದ ಶ್ರೀ ಎಸ್.ವಿ.ಆರ್ ರವರಿಂದ**

ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಿನಾಂಕ 11-03-2024ರಂದು ನಾನು ವೈದ್ಯರ ಬಳಿಗೆ ಸಮಾಲೋಚನೆಗೆ ಕೊನೆಯ ಬಾರಿಗೆ ಹೋಗಿದ್ದೇನೆ ಎಂದರೆ ಸರಿ. ದಿನಾಂಕ 25-04-2024ರಂದು ನಾನು ಕೊನೆಯ ಬಾರಿಗೆ ಮಾತ್ರೆಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ನಿ.ಪಿ-57 ಮತ್ತು 58ನ್ನು ತೆಗೆಸಲಾಗಿದೆ ಎಂದರೆ ಸರಿ. ನನ್ನ ಎಡಮುಂಗೈಗೆ ಆಗಿದ್ದ ಗಾಯ ಪೂರ್ಣವಾಗಿ ವಾಸಿಯಾಗಿವೆ ಎಂದರೆ ಸರಿ. ನನ್ನ ಬಲಕೈಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿ. ನಾನು ಹೆಚ್ಚಿನ ಕೆಲಸವನ್ನು ಬಲಕೈನಲ್ಲಿ ಮಾಡುತ್ತೇನೆ ಎಂದರೆ ಸರಿ. ನನ್ನ ಎಡಕೈನ ಮುರಿತವಾಗಿದ್ದ ಮೂರು ಮೂಳೆಗಳು ಕೂಡಿಕೊಂಡಿವೆ ಎಂದರೆ ಸರಿ. ನನ್ನ ಎಡಕೈನ ಮೂಳೆ ಮುರಿತಗಳಿಗೆ ಹಾಕಿದ್ದ ಕೆ-ವೈಯರ್ ನ್ನು ತೆಗೆದಿರುವುದಿಲ್ಲ. ನನ್ನ ಎಡಕೈ ಮತ್ತು ಅದರ ಬೆರಳುಗಳ ಚಲನವಲನಗಳಿಗೆ ವ್ಯಾಯಾಮವನ್ನು ಹೇಳಿಕೊಟ್ಟಿದ್ದಾರೆ ಎಂದರೆ ಸರಿ. ಈಗಲೂ ನಾನು ವ್ಯಾಯಾಮ ಮಾಡುತ್ತಿದ್ದೇನೆ ಎಂದರೆ ಸರಿ. ನನ್ನ ಎಡಕೈಗೆ ಮಾಡಿದ್ದ ಚರ್ಮದ ಕಸಿಯ ಜಾಗದಲ್ಲಿ ಸಂಪೂರ್ಣ ಸ್ಪರ್ಶ ಜ್ಞಾನ ಇದೆ ಎಂದರೆ ಸರಿಯಲ್ಲ. ನನ್ನ ಬೆರಳುಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದರೆ ಸರಿಯಲ್ಲ. ನನ್ನ ಸಮಸ್ಯೆಗಳನ್ನು ವೈದ್ಯರು ಕೇಳಿ ಅಂಗನ್ಯೂನ್ಯತಾ ಪ್ರಮಾಣಪತ್ರ ನೀಡಿದ್ದಾರೆ ಎಂದರೆ ಸರಿ. ನನ್ನ ಕೈನ ಅಂಗನ್ಯೂನ್ಯತೆ ಅಳೆಯುವ ಸಂದರ್ಭದಲ್ಲಿ ವೈದ್ಯರು ನನ್ನ ಕೈಗೆ ಯಾವುದೇ ಕೆಲಸ ನೀಡಿಲ್ಲ ಎಂದರೆ ಸರಿ. ನನ್ನ ಎಡಕೈನಿಂದ ನಾನು ಮೊದಲು ಯಾವ ರೀತಿ ಕೆಲಸ ಮಾಡುತ್ತಿದ್ದೆನೋ ಅದೇ ರೀತಿ ಈಗಲೂ ಮಾಡಬಹುದು ಎಂದರೆ ಸರಿಯಲ್ಲ. ನನ್ನ ಎಡಕೈ ಬಿಟ್ಟು ದೇಹದ ಇತರೇ ಭಾಗಗಳಿಗೆ ಯಾವುದೇ ಗಾಯಗಳಾಗಿಲ್ಲ ಎಂದರೆ ಸರಿ.

2) ನಾನು ಕಾರಿನಲ್ಲಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದ ಬಗ್ಗೆ ರಶೀದಿಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನನಗೆ ಮಾಂಸ ಮತ್ತು ಮೊಟ್ಟೆ ತಿನ್ನಲು ವೈದ್ಯರು ಹೇಳಿದ್ದಾರೆ ಎಂದರೆ ಸರಿ. ನಾನು ಆಸ್ಪತ್ರೆಯಲ್ಲಿದ್ದಾಗ ನನ್ನ ಗಂಡ ಮತ್ತು ಸಹೋದರಿಯರು ನನ್ನನ್ನು ಒಬ್ಬರ ನಂತರ ಒಬ್ಬರು

ನೋಡಿಕೊಂಡಿದ್ದಾರೆ ಎಂದರೆ ಸರಿ. ಆಸ್ಪತ್ರೆಯವರು ಸಹಾಯಕರಿಗೆ ನೀಡಿದ್ದ ಕಾರ್ಡ್‌ನ್ನು ಹಾಜರು ಮಾಡಿರುವುದಿಲ್ಲ. ಚಿಕಿತ್ಸೆಗೆ ಹಣ ಖರ್ಚಾದ ಬಗ್ಗೆ ಎಲ್ಲಾ ಬಿಲ್ಲುಗಳು ಮತ್ತು ರಶೀದಿಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿ.

3) ನಾನು ಕೂಲಿ ಮತ್ತು ಮನೆಕೆಲಸ ಮಾಡಿ ತಿಂಗಳಿಗೆ ರೂ.30,000/- ಹಣ ಸಂಪಾದನೆ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿ. ನಿ.ಪಿ-55ರಲ್ಲಿ ಏನೇನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಬಿ.ಪಿ.ಎಲ್ ಪಡಿತರ ಚೀಟಿ ಇರುತ್ತದೆ. ನನ್ನ ಗಂಡ ಕೂಲಿ ಮಾಡುತ್ತಾರೆ ಮತ್ತು ಆತ ಮನೆಯ ಯಜಮಾನ ಎಂದರೆ ಸರಿ. ನಿ.ಪಿ-55ರಲ್ಲಿ ಹೇಳಿರುವಷ್ಟು ಅಂಗನ್ಯೂನ್ಯತೆ ನನಗೆ ಆಗಿಲ್ಲ ಎಂದರೆ ಸರಿಯಲ್ಲ. ವಾಸಿಯಾಗಿರುವ ನನ್ನ ಕೈನ ಛಾಯಾಚಿತ್ರ ಹಾಜರು ಮಾಡಲು ತೊಂದರೆ ಇರುವುದಿಲ್ಲ. (ಸಾಕ್ಷಿಯ ಕೈಯನ್ನು ಪರಿಶೀಲಿಸಲಾಗಿ ಆಕೆಯ ಕೈಗೆ ಗಾಯ ಆಗಿದ್ದ ಸ್ಥಳದಲ್ಲಿ ಚರ್ಮ ಕಿತ್ತು ಹೋಗಿದ್ದ ಸ್ಥಳದಲ್ಲಿ ಗಾಯ ವಾಸಿಯಾಗಿದ್ದು ಸ್ಥಳದಲ್ಲಿ ಸ್ವಲ್ಪ ಹಳ್ಳ ಇರುತ್ತದೆ.) ಅಪಘಾತದಿಂದ ಆದ ಗಾಯಗಳಿಂದ ನನಗೆ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದ ಪೂರ್ವದಲ್ಲಿ ನಾನು ಯಾವ ರೀತಿ ಆರೋಗ್ಯವಾಗಿದ್ದೆನೋ ಅದೇ ರೀತಿ ಆರೋಗ್ಯವಾಗಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಹೇಳಿದಷ್ಟು ಹಣ ಪ್ರಯಾಣಕ್ಕಾಗಿ, ಊಟೋಪಚಾರಕ್ಕಾಗಿ, ಸಹಾಯಕರಿಗೆ ಹಾಗೂ ಇನ್ನಿತರ ಸಾಂದರ್ಭಿಕ ಖರ್ಚಾಗಿಲ್ಲ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಕೇಳಿದಷ್ಟು ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಸದಸ್ಯರು, ಹೆಚ್ಚುವರಿ ಮೋಟಾರು ವಾಹನ**
**ಅಪಘಾತ ಪರಿಹಾರ ಮಂಡಳಿ, ಕುಂದಾಪುರ**